# ಲೋಕಶಿಕ್ಷಣ



✤ ಮೊದಲು ಹೃದಯಮಂದಿರದಲ್ಲಿ ಭಗವಂತನನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಿ. ಬಳಿಕ ಇಚ್ಛೆಯಾದರೆ ಲೆಕ್ಚರ್ ಕೊಡಿ. ವಿವೇಕ, ವೈರಾಗ್ಯ ಗಳಿಸಿಕೊಳ್ಳದೆ ಕೇವಲ 'ಬ್ರಹ್ಮ, ಬ್ರಹ್ಮ' ಅಂತ ಹೇಳುತ್ತಿದ್ದರೆ ಏನು ದೊರೆತೀತು?

✤ ಲೋಕಶಿಕ್ಷಣ ಬಹಳ ಕಠಿಣವಾದ ಕೆಲಸ. ಭಗವಂತ ತನ್ನ ಸಾಕ್ಷಾತ್ಕಾರ ಕೊಟ್ಟು ಆದೇಶವೀಯುವುದಾದರೆ ಮನುಷ್ಯ ಲೋಕಶಿಕ್ಷಣ ಕಾರ್ಯವನ್ನು ಮಾಡಬಲ್ಲ. ನಾರದ ಶುಕದೇವಾದಿಗಳಿಗೆ ಭಗವಂತನಿಂದ ಆದೇಶ ದೊರೆತಿತ್ತು. ಶಂಕರಾಚಾರ್ಯರಿಗೂ ದೊರೆತಿತ್ತು. ಆದೇಶವಿಲ್ಲದೆ ಇತ್ತು ಎಂದರೆ, ಯಾರು ತಾನೇ ನಿನ್ನ ಮಾತಿಗೆ ಬೆಲೆ ಕೊಡುತ್ತಾರೆ?

✤ ನೀರು ಬೇಕು ಅಂತ ಬಾವಿ ತೋಡುತ್ತಾರೆ. ಅಲ್ಲೇನಾದರೂ ಒಂದು ಸ್ವಲ್ಪ ಅರೆ ಸಿಕ್ಕಿತು ಅಂದರೆ, ಆ ಸ್ಥಳ ಬಿಟ್ಟುಬಿಡುತ್ತಾರೆ. ಬಳಿಕ ಬೇರೆ ಕಡೆ ಅಗೆಯಲು ಶುರು ಮಾಡುತ್ತಾರೆ. ಅಲ್ಲೇನಾದರೂ ಮರಳು ಸಿಕ್ಕಿಬಿಟ್ಟಿತು ಎಂದರೆ, ಆ ಭಾಗವನ್ನೂ ಬಿಟ್ಟು ಬಿಡುತ್ತಾರೆ. ಹೀಗೆ ಮುಂದುವರೆಯುತ್ತಲೇ ಇರುತ್ತಾರೆ. ಸುಮ್ಮಸುಮ್ಮನೆ ಮನಸ್ಸಿನಲ್ಲಿ ತನಗೆ ಆದೇಶ ದೊರೆತುಬಿಟ್ಟಿದೆ ಎಂದು ಭಾವಿಸಿಕೊಂಡುಬಿಟ್ಟರೆ ಅದು ಯಾವ ಪ್ರಯೋಜನಕ್ಕೂ ಬಾರದು.

✤ ಸತ್ಯವಾಗಿಯೂ ಭಗವಂತ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತಾನೆ, ನಮ್ಮೊಡನೆ ಮಾತುಕತೆ ಆಡುತ್ತಾನೆ. ಆಗ ಆತನಿಂದ ಆದೇಶ ಪಡೆಯಲು ಸಾಧ್ಯ. ಆ ರೀತಿಯಾಗಿ ಆದೇಶ ಪಡೆದ ವ್ಯಕ್ತಿಯ ಬಾಯಿಯಿಂದ ಬರುವ ಮಾತಿಗೆ ಎಷ್ಟು ಬಲ! ಅದು ಪರ್ವತಗಳನ್ನೂ ಚಲಿಸಿಬಿಡಬಲ್ಲದು. ಬರಿದೆ ಉಪನ್ಯಾಸ ಯಾವುದಕ್ಕೆ ಬಂದೀತು? ಒಂದೆರೆಡು ದಿನಗಳ ಮಟ್ಟಿಗೆ ಕೇಳುತ್ತಾರೆ, ಬಳಿಕ ಮರೆತುಬಿಡುತ್ತಾರೆ. ಅದರಂತೆ ಅವರು ಎಂದಿಗೂ ನಡೆದುಕೊಳ್ಳುವುದಿಲ್ಲ.

✤ ಭಗವಂತನಿಂದ ಆದೇಶ ಪಡೆಯದಿದ್ದರೆ ಅದು ಹಾಸ್ಯಾಸ್ಪದಕ್ಕೆ ಇಟ್ಟುಕೊಳ್ಳುತ್ತದೆ. ತನಗೇ ಪರಿಪಕ್ವತೆ ತಂದುಕೊಂಡಿಲ್ಲ, ಬೇರೆಯವರಿಗೆ ಪರಿಪಕ್ವತೆ ತರಲು ಹೋಗುವುದು! ಕುರುಡ ಕುರುಡನಿಗೆ ದಾರಿ ತೋರಿಸಿದಂತೆ! ಈ ವಿಧವಾದ ಹಿತ ವಿಪರೀತಕ್ಕಿಟ್ಟುಕೊಳ್ಳುತ್ತದೆ. ಭಗವಂತನ ಸಾಕ್ಷಾತ್ಕಾರ ತಂದುಕೊಂಡ ನಂತರ ಅಂತರ್ದೃಷ್ಟಿ ಉಂಟಾಗುತ್ತದೆ; ಯಾರಿಗೆ ಏನು ಎಂಬುದು ಗೊತ್ತಾಗುತ್ತದೆ. ಆಗ ಸರಿಯಾದ ಔಷಧಿ ಕೊಡಬಹುದು.

✤ ಭಗವಂತನಿಂದ ಆದೇಶ ಪಡೆದುಕೊಳ್ಳದೆ ಇದ್ದರೆ, 'ನಾನು ಲೋಕಶಿಕ್ಷಣ ಮಾಡುತ್ತಿದ್ದೇನೆ' ಎಂಬ ಅಹಂಕಾರ ಬಂದುಬಿಡುತ್ತದೆ. ಅಹಂಕಾರ ಅಜ್ಞಾನದಿಂದ ಉಂಟಾಗುತ್ತದೆ. ಅಜ್ಞಾನದಿಂದಲೇ ಅನ್ನಿಸುತ್ತದೆ, 'ನಾನು ಕರ್ತ' ಎಂಬುದಾಗಿ.

✤ ನೀವು ಹೇಳುತ್ತೀರಿ, ಜಗತ್ತಿಗೆ ಉಪಕಾರ ಮಾಡಬೇಕು ಎಂಬುದಾಗಿ. ಜಗತ್ತೇನು ಒಂದು ಅಂಗೈಯಗಲದ್ದೆ? ಅದೂ ಈ ಜಗತ್ತಿಗೆ ಉಪಕಾರ ಮಾಡಲು ಮೊದಲನೆಯದಾಗಿ ನೀವು ಯಾರು? ಮೊದಲು ಸಾಧನೆ ಮಾಡಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ, ಆತ ಶಕ್ತಿಯನ್ನು ಕರುಣಿಸಿದ್ದೇ ಆದರೆ ಆಗ ಎಲ್ಲರಿಗೂ ಹಿತವನ್ನು ಮಾಡಬಲ್ಲಿರಿ; ಇಲ್ಲದಿದ್ದರೆ ಸಾಧ್ಯವಿಲ್ಲ.

✤ ಆದರೆ ಶಕ್ತಿವಿಶೇಷತೆಯನ್ನು ಒಪ್ಪಲೇಬೇಕು. ಸಾಮಾನ್ಯ ಜೀವಿಗಳು ಲೋಕಶಿಕ್ಷಣ ಮಾಡಲು ಹೆದರುತ್ತಾರೆ. ಸಾಮಾನ್ಯ ಕಡ್ಡಿ ಹೇಗೋ ಮಾಡಿ ತಾನು ಮಾತ್ರ ನೀರಿನ ಮೇಲೆ ತೇಲಿಹೋಗಬಲ್ಲುದು. ಆದರೆ ಅದರ ಮೇಲೇನಾದರೂ ಒಂದು ಹಕ್ಕಿ ಬಂದು ಕುಳಿತರೂ ಅದು ಮುಳುಗಿಹೋಗುತ್ತದೆ. ಆದರೆ ನಾರದಾದಿಗಳು ಭಾರೀ ದಿಮ್ಮಿಗಳಂಥ ಮನುಷ್ಯರು. ಈ ವಿಧದ ದಿಮ್ಮಿ ತಾನೂ ತೇಲಿ ಹೋಗುವುದಲ್ಲದೆ ಮನುಷ್ಯರನ್ನೂ, ಹಸುಗಳನ್ನು, ಕೊನೆಗೆ ಆನೆಯನ್ನೂ ಹೊತ್ತುಕೊಂಡು ಹೋಗಿಬಿಡುತ್ತದೆ.

✤ ಭಗವಂತನಿಂದ ಆದೇಶ ದೊರೆತಿದ್ದರೆ, ಆಗ ಲೋಕಶಿಕ್ಷಣ ತಪ್ಪಿನ ಕಾರ್ಯವೇನಲ್ಲ. ಆದೇಶ ಪಡೆದು ಲೋಕಶಿಕ್ಷಣ ಮಾಡಿದರೆ ಆತನನ್ನು ಯಾರೂ ಸೋಲಿಸಲಾರರು. ವಾಗ್ದೇವಿಯ ಒಂದು ಕಿರಣ ಮಾತ್ರ ಬಿದ್ದುದೇ ಆದರೆ, ವ್ಯಕ್ತಿಗೆ ಅಂಥ ಶಕ್ತಿ ಬಂದುಬಿಡುತ್ತದೆ. ಆತನೆದುರು ದೊಡ್ಡ ದೊಡ್ಡ ಪಂಡಿತರೆಲ್ಲ ಎರೆಹುಳುವಿನಂತಾಗಿ ಬಿಡುತ್ತಾರೆ.

✤ ದೀಪ ಉರಿಯುತ್ತಿದ್ದರೆ ದೀಪದ ಚಿಟ್ಟೆ ಗುಂಪುಗುಂಪಾಗಿ ತಾವೇ ಬರುತ್ತವೆ – ಆಹ್ವಾನವೀಯಬೇಕಾಗಿರುವುದಿಲ್ಲ. ಅದೇ ರೀತಿ ಯಾರಿಗೆ ಆದೇಶ ದೊರೆತಿದೆಯೋ ಆತ ಜನರನ್ನು ಕರೆಯಬೇಕಾಗಿರುವುದಿಲ್ಲ. ಆತನಲ್ಲಿ ಅಂಥ ಅತಿಮಾನುಷ ಆಕರ್ಷಕ ಶಕ್ತಿ. ಆಗ ಜನರು ತಾವುತಾವಾಗಿಯೇ ಬಂದು ಆತನನ್ನು ಮುತ್ತುತ್ತಾರೆ. ಆಗ ರಾಜಮಹಾರಾಜರೂ, ಬಾಬುಗಳೂ ಎಲ್ಲರೂ ಗುಂಪುಗುಂಪಾಗಿ ಬರಲಾರಂಭಿಸುತ್ತಾರೆ.

✤ ಕೆಲಸಕ್ಕೆ ಬಾರದವರೆಲ್ಲಾ ಉಪನ್ಯಾಸ ಕೊಟ್ಟರೆ ಅದು ಯಾವ ಪ್ರಯೋಜನಕ್ಕೂ ಬಾರದು. ಭಗವಂತನಿಂದ ಬಂದ ಲಾಂಛನ ಹತ್ತಿರ ಇದ್ದರೆ ತಾನೆ ಹೇಳಿದ ಹಾಗೆ ಕೇಳುತ್ತಾರೆ.

ಶ್ರೀರಾಮಕೃಷ್ಣ ವಚನವೇದದಿಂದ

# ಅಸಾಧಾರಣ ವ್ಯಕ್ತಿತ್ವದ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ



**ಜು**ಲೈ ೨೭ರಂದು ವಿಧಿವಶರಾದ ಭಾರತದ ೧೧ನೇ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಅಸಾಧಾರಣ ವ್ಯಕ್ತಿತ್ವದ, ಅತಿಶ್ರೇಷ್ಠ ಸಾಧನೆಯ, ಸಾರ್ಥಕ ಜೀವನದ ಯಾತ್ರೆಯನ್ನು ಕೊನೆಗೊಳಿಸಿದರು. ಭಾರತದ ಅತ್ಯುನ್ನತ ಪದವಿಯನ್ನು ಅಲಂಕರಿಸಿದ ಧೀಮಂತರಾಗಿ ಮಾತ್ರವಲ್ಲ , ಆಧುನಿಕ ಭಾರತದ ಅತ್ಯುನ್ನತ ವಿಜ್ಞಾನಿಯಾಗಿ, ಅತಿಶ್ರೇಷ್ಠ ಶಿಕ್ಷಕರಾಗಿ, ಮಾನವೀಯ ಹೃದಯದ ಸರಳ, ಸುಸಂಸ್ಕೃತ ಭಾರತೀಯನಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಆಧ್ಯಾತ್ಮಿಕ ಸಾಧಕನಾಗಿ ಅವರು ಎತ್ತರೇಕ್ಕೇರುತ್ತಾರೆ. ಹಲವು ಬಗೆಯ ಮಹಿಮಾನ್ವಿತ ಗುಣಗಳು ಒಬ್ಬ ವ್ಯಕ್ತಿಯಲ್ಲಿ ಕಾಣಬೇಕೆಂದರೆ, ಅದು ಡಾ. ಕಲಾಂ ಅವರಲ್ಲಿ ಮಾತ್ರ.

## ನನಸಾದ ಕನಸು

ತಮಿಳುನಾಡಿನ ರಾಮೇಶ್ವರಂ ಪರಿಸರದಲ್ಲಿ ಬೆಳೆದ ಕಲಾಂ ಅವರು ತಮ್ಮ ಪರಿಸರದಿಂದ, ನೆರೆಹೊರೆಯ ವಿಶೇಷ ವ್ಯಕ್ತಿಗಳಿಂದ ತಮ್ಮ ಉಜ್ವಲ ಬದುಕನ್ನು ಕಟ್ಟುವ ಪ್ರೇರಣೆ ಪಡೆದರು. ತಂದೆ, ತಾಯಿ, ಬಂಧುಗಳು, ಶಿಕ್ಷಕರು ತಮ್ಮ ಮೇಲೆ ಪ್ರಭಾವ ಬೀರಿದ ಬಗೆ, ತನ್ನಲ್ಲಿ ಅಡಗಿದ್ದ ಅಸಾಧಾರಣ ಚೈತನ್ಯವನ್ನು ಗುರುತಿಸಿದ ಅವರು ತಮಗೆ ಧೈರ್ಯ ತುಂಬಿದ ರೀತಿ, ಅಪಾರ ಆತ್ಮವಿಶ್ವಾಸವನ್ನು ಮೂಡಿಸುವ ಅವರ ಮಾತುಗಳು – ಇವನ್ನೆಲ್ಲ ಅಬ್ದುಲ್ ಕಲಾಂ ಕೊನೆಯವರೆಗೂ ಮರೆಯಲಿಲ್ಲ. ತಾವು ಕಾಣುತ್ತಿದ್ದ ಕನಸುಗಳ ಬಗ್ಗೆ ಹೇಳುತ್ತ, ''ಚಿಕ್ಕಂದಿನಿಂದಲೇ ನಾನು ಆಕಾಶದ ರಹಸ್ಯಗಳ ಬಗ್ಗೆ ಮತ್ತು ಹಾರಾಡುವ ಹಕ್ಕಿಗಳ ಬಗ್ಗೆ ಯೋಚಿಸುತ್ತಿದ್ದೆ. ಕೊಕ್ಕರೆ ಮತ್ತು ಇತರ ಸಮುದ್ರ ಹಕ್ಕಿಗಳು ನೆಲದಿಂದ ಹಾರುತ್ತಾ ಪಟಪಟನೆ ರೆಕ್ಕೆ ಹೊಡೆದು, ಒಂದು ಕ್ಷಣ ಹಾಗೆಯೇ ತೇಲುತ್ತಾ ಮತ್ತೆ ಎಗರುವುದು ಎಷ್ಟೊಂದು ಸುಂದರವಾದದ್ದು ಹೇಳಿ! ತೀರ ಪ್ರದೇಶದ ಹಳ್ಳಿಯ ಸಾಧಾರಣ ಹುಡುಗನಾದ ನಾನು ಮುಂದೊಂದು ದಿನ ಖಂಡಿತ ಆಕಾಶಕ್ಕೇರುತ್ತೇನೆ ಎಂದು ಕನಸು ಕಂಡಿದ್ದೆ'' ಎನ್ನುತ್ತಾರೆ *('ಅಗ್ನಿಯ ರೆಕ್ಕೆಗಳು', ಕಲಾಂ ಆತ್ಮಚರಿತ್ರೆ, ೨೦೦೨, ಪು.೧೨)*. ಅವರ ಕನಸು ನನಸಾಯಿತು. ಮುಂದೆ ವಿಜ್ಞಾನದಲ್ಲಿ ಅತ್ಯುನ್ನತ ಶಿಕ್ಷಣ ಪಡೆದು, ರಾಕೆಟ್ ತಂತ್ರಜ್ಞಾನ, ಉಪಗ್ರಹಗಳ ಯೋಜನೆ, ಕ್ಷಿಪಣಿಗಳ ಅಭಿವೃದ್ಧಿ ಮೊದಲಾದ ಅತ್ಯಾಧುನಿಕ ಕ್ಷೇತ್ರಗಳಲ್ಲೆಲ್ಲ ಭಾರತವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಕಾರ್ಯದಲ್ಲಿ ಡಾ.ಕಲಾಂ ಮಹತ್ತರ ಪಾತ್ರವನ್ನು ವಹಿಸಿದರು. ಒಬ್ಬ ಉನ್ನತ ದರ್ಜೆಯ ವಿಜ್ಞಾನಿಯಾಗಿ ಕೆಲಸ ಮಾಡುವಾಗಲೂ ಅವರು ತಮ್ಮ ಸರಳತೆ, ವಿನಯ, ನಿರಹಂಕಾರ ಸ್ವಭಾವವನ್ನು ಮಾತ್ರ ಬಿಡಲಿಲ್ಲ.



## ವೈಜ್ಞಾನಿಕ ಸಾಧನೆ

ವಿದ್ಯಾಭ್ಯಾಸ ಮುಗಿದು, ಉದ್ಯೋಗಾರ್ಥಿಯಾಗಿ ಭಾರತೀಯ ವಾಯುಪಡೆಯಲ್ಲಿ ಪೈಲಟ್ ಆಗುವ ಗುರಿ ಹೊಂದಿದ್ದ ಕಲಾಂ, ಅದಕ್ಕೆ ಅವಕಾಶ ದೊರೆಯದಿದ್ದಾಗ ತುಂಬ ಮರುಗಿದ್ದರು. ಆದರೆ ಹೃಷೀಕೇಶದ ಸಂತ ಸ್ವಾಮಿ ಶಿವಾನಂದರ ಭವಿಷ್ಯವಾಣಿಯಂತೆ ಅವರು ತಮ್ಮ ಅಂತರಂಗದ ಕರೆಗೆ ಓಗೊಟ್ಟರು; ದೈವೇಚ್ಛೆಗೆ ಶರಣಾಗಿ ರಕ್ಷಣಾ ಇಲಾಖೆಯಲ್ಲಿ ವಿಜ್ಞಾನಿಯಾಗಿ ತಮ್ಮ ಸೇವೆಯನ್ನು ಆರಂಭಿಸಿದರು. ಅನಂತರ ಅವಕಾಶಗಳು ಬಂದಂತೆಲ್ಲ 'ತುಂಬಾ' ರಾಕೆಟ್ ಉಡ್ಡಯಣ ಕೇಂದ್ರ, ಹೆಚ್.ಎ.ಎಲ್., ಡಿ.ಆರ್.ಡಿ.ಓ, ಇಸ್ರೋ ಮೊದಲಾದ ಸಂಸ್ಥೆಗಳಲ್ಲಿ ವೈಮಾನಿಕ, ಉಪಗ್ರಹ ಯೋಜನೆಗಳಲ್ಲಿ ಮಹತ್ತರ ಕಾರ್ಯ ನಿರ್ವಹಿಸಿದರು. ಡಾ.ವಿಕ್ರಂ ಸಾರಾಭಾಯಿ, ಡಾ.ಸತೀಶ್ ಧವನ್ ಮೊದಲಾದ ದಿಗ್ಗಜಗಳ ಮಾರ್ಗದರ್ಶನ ಹಾಗೂ ಬೆಂಬಲದಿಂದ ಕಲಾಂ ಒಬ್ಬರು ಮುಂಚೂಣಿಯ ವಿಜ್ಞಾನಿಯಾಗಿ, ಒಬ್ಬ ಅತ್ಯುತ್ತಮ ಕಾರ್ಯ ನಿರ್ವಾಹಕರಾಗಿ ರೂಪುಗೊಂಡರು. ಭಾರತದ ಆಧುನಿಕ ತಂತ್ರಜ್ಞಾನ, ರಕ್ಷಣಾ ವ್ಯವಸ್ಥೆ, ಬಾಹಾಕಾಶ ಪ್ರಗತಿಗಳು ಕಲಾಂ ಅವರ ಪ್ರತಿಭೆ, ಕಾರ್ಯದಕ್ಷತೆ ಹಾಗೂ ಬದ್ಧತೆಗಳಿಂದ ಸಂಪನ್ನಗೊಂಡವು ಎಂದರೆ ತಪ್ಪಾಗಲಾರದು. ಈ ಎಲ್ಲ ಸಾಧನೆಗಳ ಫಲವಾಗಿ ಅವರಿಗೆ 'ಭಾರತರತ್ನ'ವೂ ಸೇರಿದಂತೆ ಅನೇಕಾನೇಕ ಪ್ರಶಸ್ತಿಗಳು ಸಂದವು.

## ಶಿಸ್ತುಬದ್ಧತೆ, ನಾಯಕತ್ವ

ಡಾ.ಅಬ್ದುಲ್ ಕಲಾಂ ಅವರು ಬಾಲ್ಯದಿಂದಲೇ ರೂಢಿಸಿಕೊಂಡು ಬಂದಿದ್ದ ಶಿಸ್ತುಬದ್ಧತೆ ಅವರ ಜೀವನದುದ್ದಕ್ಕೂ ಒಂದು ವಿಶೇಷ ಗುಣವಾಗಿ ಬೆಳೆದು ಬಂತು. ವೈಜ್ಞಾನಿಕ ಅನ್ವೇಷಣೆ, ಪ್ರಗತಿ ಇವುಗಳಿಗೆ ಸಂಶೋಧಕನೊಬ್ಬ ರೂಢಿಸಿಕೊಳ್ಳಬೇಕಾದ ಅತ್ಯುತ್ತಮ ಗುಣವಿದು. ಭಾರತದಲ್ಲಿ ಸಹಜವಾಗಿ ಕಂಡುಬರುವ ಆಲಸ್ಯ, ಅಸೂಯೆ, ಸ್ಪರ್ಧಾಮನೋಭಾವಗಳು ಕಾರ್ಯನಿರ್ವಹಣೆಗೆ, ಪ್ರಗತಿಗೆ ಹಲವು ವಿಧದಲ್ಲಿ ಅಡಚಣೆಯಾಗಿರುವ ಸತ್ಯವನ್ನು ಕಂಡುಕೊಂಡ ಕಲಾಂ, ಅನೇಕ ಸಲ ಕಟ್ಟುನಿಟ್ಟಾದ ನಿರ್ಧಾರಗಳನ್ನೂ ತೆಗೆದುಕೊಂಡದ್ದಿದೆ; ತಮ್ಮ ಸಹೋದ್ಯೋಗಿಗಳೊಂದಿಗೆ ಕಠಿಣವಾಗಿ ವಾದಿಸಿದ್ದಿದೆ. ಆದರೆ ಅವರ ದೃಷ್ಟಿ ದೇಶದ ಪ್ರಗತಿ, ವೈಜ್ಞಾನಿಕ ಮುನ್ನಡೆ, ಕಾರ್ಯಸಾಧನೆಯಾಗಿತ್ತೇ ವಿನಾ ವೈಯಕ್ತಿಕ ಭಿನ್ನಭಿಪ್ರಾಯಗಳಲ್ಲ. ತನ್ನ ಹಿರಿಯರೊಂದಿಗೆ, ಸಹೋದ್ಯೋಗಿಗಳೊಂದಿಗೆ, ಕಿರಿಯರೊಂದಿಗೆ ಅವರು ಅತ್ಯಂತ ಉತ್ಸಾಹದಿಂದ ಬೆರೆಯುತ್ತಿದ್ದರು, ಕೆಲಸದಲ್ಲಿ ಅವರೊಂದಿಗೆ ಒಂದಾಗುತ್ತಿದ್ದರು. ಅವರು



ಕ್ರಿಯಾಶೀಲ ವಿಜ್ಞಾನಿಗಳಿಗೆ ಸ್ಫೂರ್ತಿಯ ಕೇಂದ್ರವಾಗಿದ್ದರು. ತಮ್ಮ ಕೌಟುಂಬಿಕ ಪರಿಸರ, ಧಾರ್ಮಿಕ ಶ್ರದ್ಧೆ, ತಾವು ಭೇಟಿಯಾದ ಸಾಧುಸಂತರ ಪ್ರಭಾವ ಇಂತಹ ಶಿಸ್ತುಬದ್ಧ ಸ್ವಭಾವವನ್ನು ತಮ್ಮಲ್ಲಿ ಬೆಳೆಸಿಕೊಂಡು ಬಂತು ಎಂದು ಡಾ.ಕಲಾಂ ತಮ್ಮ ಜೀವನ ಚರಿತ್ರೆಯಲ್ಲಿ ಬರೆಯುತ್ತಾರೆ.

## ಕುಟುಂಬ, ಸಮಾಜ, ಜನತೆ

ಹಲವು ಮಂದಿ ವಿಜ್ಞಾನಿಗಳು ತಮ್ಮ ಬಂಧುಬಾಂಧವರ, ಸ್ನೇಹಿತರ, ತನ್ನ ಸಮಾಜದ ಸಂಪರ್ಕದಿಂದ ದೂರವಾಗಿ, ತಮ್ಮ ವೈಜ್ಞಾನಿಕ ಜಗತ್ತಿನಲ್ಲೇ ಮುಳುಗಿಬಿಡುವ ಉದಾಹರಣೆಗಳು ಸಾಕಷ್ಟಿವೆ. ಇದಕ್ಕೆ ಅಪವಾದವೆಂಬಂತೆ, ಅಬ್ದುಲ್ ಕಲಾಂ ಅವರು ಎಂದೂ ತನ್ನ ಜನರಿಂದ ದೂರವಾಗಲಿಲ್ಲ. ತಮ್ಮ ಅಧ್ಯಯನ, ಉದ್ಯೋಗ ಹಾಗೂ ಜವಾಬ್ದಾರಿಗಳ ನಿಮಿತ್ತ ಅವರು ತಮ್ಮ ಕುಟುಂಬದಿಂದ ದೂರವಿರಬೇಕಾಗಿ ಬಂದರೂ, ಕುಟುಂಬದ ಸದಸ್ಯರನ್ನೆಲ್ಲ ಅವರು ಅತ್ಯಂತ ಪ್ರೀತಿಸುತ್ತಿದ್ದರು. ತಂದೆ, ತಾಯಿ ಅಣ್ಣಂದಿರು, ತಂಗಿ ಹಾಗೂ ಇನ್ನಿತರ ಬಂಧುಗಳೊಂದಿಗೆ ಕೊನೆಯವರೆಗೂ ಸಂಪರ್ಕ ಇಟ್ಟುಕೊಂಡಿದ್ದರು. ಅವರ ಕಾರ್ಯಕ್ಷೇತ್ರ ವಿಶಾಲವಾದಂತೆ ವೈವಿಧ್ಯಮಯ ವ್ಯಕ್ತಿತ್ವಗಳುಳ್ಳ ಜನರ ಒಡನಾಟ, ಪರಿಚಯಗಳೂ ವಿಸ್ತಾರಗೊಂಡವು; ಇಡೀ ಭಾರತವೇ ತಮ್ಮ ಸಮಾಜವೆಂಬಂತೆ ಅವರು ವಿವಿಧ ಸಂಧರ್ಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ದೇಶದ ಪ್ರತಿಷ್ಠಿತ ಸಂಸ್ಥೆಗಳಾದ ಐ.ಐ.ಟಿ., ಐ.ಐ.ಎಸ್.ಸಿ. ಹಾಗೂ